ದಿನಾಂಕ 10-12-2019 ಅಸಲು ದಾವಾ ಸಂ.37/2014

ಪಿ.ಡಬ್ಲ್ಯೂ.-1

ಸಾಕ್ಷಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ವಿ ಡಿ ಪಿ ವಕೀಲರಿಂದ

ನಾವು ನಮ್ಮ ಶೆಡ್ಡನ್ನು ನಾಶಪಡಿಸಿರುತ್ತಾರೆಂದು ಈ ದಾವೆಯನ್ನು 2014 ರಲ್ಲಿ ಮಾಡಿರುತ್ತೇವೆ. ನಾನು ದಾವೆ ಮಾಡುವ ಮುಂಚೆ 2014 ರಲ್ಲಿ ಕಾಲುಭಾಗ ಮತ್ತು 2017 ರಲ್ಲಿ ಒಮ್ಮೆ ನಮ್ಮ ಶೆಡ್ಡನ್ನು ನಾಶಪಡಿಸಿರುತ್ತಾರೆ. ನಾಶಪಡಿಸುವುದಕ್ಕಿಂತ ಮುಂಚೆ 2014 ರಲ್ಲಿ ನಮ್ಮ ಶೆಡ್ಡು ಪೂ.ಪ 20 x ದ. ಉ 60 ಫೂಟ್ ಅಳತೆ ಇತ್ತು. ಈ ದಾವೆಯಲ್ಲಿ ಕಾಲುಭಾಗ ನಮ್ಮ ಶೆಡ್ಡನ್ನು ನಾಶಪಡಿಸಿದ ಬಗ್ಗೆ ಹೇಳಿ ಬರೆಸಿರುತ್ತೇವೆ. ಪ್ರತಿವಾದಿಯರು ಪಶ್ಚಿಮದಿಂದ ಪೂರ್ವದವರೆಗೆ 25 ಪ್ರತಿಶತ ಶೆಡ್ಡನ್ನು ನಾಶಪಡಿಸಿರುತ್ತಾರೆ. ನಮ್ಮ ಶೆಡ್ಡಿನ ಪಕ್ಕಕ್ಕೆ ಬೇರೆಯವರ ಶೆಡ್‌ಗಳು ಇದ್ದವು. ಅವರ ಶೆಡ್‌ಗಳನ್ನು 2017 ರಲ್ಲಿ ತೆಗೆದಿರುತ್ತಾರೆ. ಈಗ ನಮ್ಮದು ಹಾಗೂ ಬೇರೆಯವರ ಶೆಡ್‌ಗಳು ಇಲ್ಲ ಎಂದರೆ ಸರಿ. ನಮ್ಮ ವಾದ ಪತ್ರದಲ್ಲಿ ನಾವು ಶಾಶ್ವತವಾಗಿ ಶೆಡ್ ಹಾಕಿದ್ದೇವೆಂದು ಹೇಳಿ ಬರೆಸಿರುತ್ತೇವೆಂದರೆ ಸರಿ . ನಮಗೆ ಶೆಡ್ ಹಾಕಲು ಬಾಡಿಗೆ ರೂಪದಲ್ಲಿ ಪರವಾನಿಗೆ ಕೊಟ್ಟಿದ್ದು, 1990 ರಿಂದ ಶೆಡ್ಡನ್ನು ಹಾಕಿರುತ್ತೇವೆ. ನಮಗೆ ಎನ್. ಓ.ಸಿ.ಯನ್ನು ಕೊಟ್ಟಿದ್ದರು. ಎನ್.ಓ.ಸಿ. ಬಿಟ್ಟು ಬೇರೆ ಯಾವುದೇ ಬಾಂಡನ್ನು ಪ್ರತಿವಾದಿಯು ಮಾಡಿಕೊಟ್ಟಿರುವುದಿಲ್ಲ. 2014 ರಲ್ಲಿ ನಾನು ಮತ್ತು ನಮ್ಮ ಪಕ್ಕದ ಶೆಡ್‌ನವರು ಸೇರಿ ಪ್ರತಿವಾದಿಯ ಮೇಲೆ ದಾವೆ ಮಾಡಿದ್ದು, 2017 ರಲ್ಲಿ ನಾನು ಒಬ್ಬನೇ ದಾವೆ ಮಾಡಿರುತ್ತೇನೆ. 2017 ರ ದಾವೆ ನಂಬರ ನೆನಪಿಲ್ಲ. 2017 ರಲ್ಲಿ ನಮಗೆ 25-30 ವರ್ಷಗಳಿಂದ ಕೊಟ್ಟ ಬಾಡಿಗೆಯನ್ನು ಮುಂದುವರೆಸುವಂತೆ ದಾವೆ ಮಾಡಿರುತ್ತೇವೆ. 2017 ರ ದಾವೆ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸುತ್ತೇನೆ. 2014 ರಲ್ಲಿ ನನ್ನ ಜೊತೆ ದಾವೆ ಮಾಡಿದವರ ಹೆಸರುಗಳು ನೆನಪಿಲ್ಲ. ಒಟ್ಟು 7 ಜನರು ಕೂಡಿ ದಾವೆ ಮಾಡಿದ್ದೆವು.

2017 ರಲ್ಲಿ ರಸ್ತೆಯ ಅಗಲೀಕರಣಕ್ಕಾಗಿ ನಮ್ಮ ಶೆಡಗಳು ಇದ್ದ ರಸ್ತೆಯಲ್ಲಿ ಶೆಡ್ಡಗಳನ್ನು ತೆರವು ಮಾಡಿಕೊಳ್ಳುವಂತೆ ಪ್ರತಿವಾದಿಯು ಮೌಖಿಕವಾಗಿ ಮನವಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ರಸ್ತೆಯ ಜಾಗಾ ಮತ್ತು ಶೆಡ್ಡಿನ ಜಾಗಾ ಬೇರೆ ಬೇರೆ ಇರುತ್ತವೆ ಎಂದು ತಿಳಿಸುತ್ತಾರೆ. ರಸ್ತೆಯ ಮಧ್ಯಭಾಗದಿಂದ 70 ಫೂಟ್ ಅಗಲೀಕರಣ ಮಾಡಬೇಕೆಂದು ನಿಯಮ ಇದ್ದು, ನನ್ನ ಶೆಡ್ಡು ರಸ್ತೆಯ ಮಧ್ಯಭಾಗದಿಂದ 30 ಫೂಟ್ ಅಂತರದಲ್ಲಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಯ ಮೌಖಿಕ ವಿನಂತಿ

ಮೇರೆಗೆ ನನ್ನ ಪಕ್ಕದ ಶೆಡ್‌ನವರು ತಮ್ಮ ಶೆಡ್‌ಗಳನ್ನು ತೆರವುಗೊಳಿಸಿದರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಾನೂ ಸಹ ನನ್ನ ಶೆಡ್ಡನ್ನು ತೆರವುಗೊಳಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಅಲ್ಲಿ ಯಾವುದೇ ಶೆಡ್ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ಬನಹಟ್ಟಿ.